# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೧೨ ಆಗಸ್ಟ್, ೨೦೨೫ (ಶ್ರಾವಣ ೨೧, ಶಕವರ್ಷ ೧೯೪೭)<br>BENGALURU, TUESDAY, 12 AUGUST, 2025 (SHRAVANA 21, SHAKAVARSHA 1947) | ನಂ. ೪೫೬<br>No. 456 |


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಏಳನೇ ಅಧಿವೇಶನ**

## ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–32)**

ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961ನ್ನು (1961ರ ಕರ್ನಾಟಕ ಅಧಿನಿಯಮ 34), ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ವೈದ್ಯಕೀಯ ನೋಂದಣಿ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪ್ರಕರಣ 28ರ ತಿದ್ದುಪಡಿ.-** ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961ನ್ನು (1961ರ ಕರ್ನಾಟಕ ಅಧಿನಿಯಮ 34)ರ, 28ನೇ ಪ್ರಕರಣದಲ್ಲಿ, "ಮೊದಲನೆ ಅಪರಾಧ ನಿರ್ಣೀತನಾದ ಸಂದರ್ಭದಲ್ಲಿ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ತರುವಾಯದ ಅಪರಾಧ ನಿರ್ಣೀತನಾದ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳ ಬದಲಿಗೆ " ಕರ್ನಾಟಕ ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಸಿದ್ಧ, ಯುನಾನಿ ಮತ್ತು ಯೋಗ ವೈದ್ಯ ವೃತ್ತಿ ನಿರತರ ನೋಂದಣಿ ಮತ್ತು ವೈದ್ಯಕೀಯ ವೃತ್ತಿ ನಿರತರ ಸಂಕೀರ್ಣ

ಉಪಬಂಧಗಳ ಅಧಿನಿಯಮ,1961(1962ರ ಕರ್ನಾಟಕ ಅಧಿನಿಯಮ 9)ರ 36ನೇ ಪ್ರಕರಣದ ಉಪಬಂಧಗಳಡಿ" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಪ್ರತಿಯೋಜಿಸತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಸಿದ್ಧ, ಯುನಾನಿ ಮತ್ತು ಯೋಗ ವೈದ್ಯ ವೃತ್ತಿ ನಿರತರ ನೋಂದಣಿ ಮತ್ತು ವೈದ್ಯಕೀಯ ವೃತ್ತಿ ನಿರತರ ಸಂಕೀರ್ಣ ಉಪಬಂಧಗಳ ಅಧಿನಿಯಮ,1961(1962ರ ಕರ್ನಾಟಕ ಅಧಿನಿಯಮ 9)ರ 36ನೇ ಪ್ರಕರಣದ ಉಪಬಂಧಗಳನುಸಾರ ನಕಲಿ ವೈದ್ಯಕೀಯ ವೃತ್ತಿಗಾಗಿ ದಂಡದ ಉಪಬಂಧಗಳನ್ನು ನಿಯಮಿಸಲು, ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 34)ನ್ನು, ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

ಆದ್ದರಿಂದ ಈ ವಿಧೇಯಕ,

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದ ಯಾವುದೇ ಹೆಚ್ಚಿನ ವೆಚ್ಚವು ಉಂಟಾಗುವುದಿಲ್ಲ.

**ದಿನೇಶ್ ಗುಂಡೂರಾವ್**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

### ಭಾಗ-1
### ಕರ್ನಾಟಕ ವೈದ್ಯಕೀಯ ನೋಂದಣಿ ಅಧಿನಿಯಮ, 1961ರ (1964ರ ಕರ್ನಾಟಕ ಅಧಿನಿಯಮ 34) ಉದ್ಧೃತ ಭಾಗ

**XXX XXX XXX**

**28. ನಕಲಿ ವೈದ್ಯಕೀಯ ವೃತ್ತಿಗಾಗಿ ದಂಡನೆಗಳು.-** ಈ ಅಧಿನಿಯಮದ ಅಡಿಯಲ್ಲಿ ನೋಂದಣಿಯಾಗಿದ್ದಾನೆಂದು ಅಥವಾ ಈ ಅಧಿನಿಯಮದ ಅಡಿಯಲ್ಲಿ ನೋಂದಣಿಯಾಗಿಲ್ಲವೆಂದು ಸುಳ್ಳು ಸುಳ್ಳಾಗಿ ಸೋಗು ಹಾಕುವ ಯಾರೇ ವ್ಯಕ್ತಿಯು ತನ್ನ ಹೆಸರು ಅಥವಾ ಶೀರ್ಷಿಕೆಗೆ ಸಂಬಂಧಿಸಿದಂತೆ ಆತನು ಹಾಗೆ ನೋಂದಣಿ ಆಗಿದ್ದಾನೆಂದು ಯಾವುದೇ ಪದಗಳು ಅಥವಾ ಅಕ್ಷರಗಳನ್ನು ಅಭಿವ್ಯಕ್ತಿಪಡಿಸಿದರೆ, ಯಾರೇ ವ್ಯಕ್ತಿಯು ಅಂಥ ನಟನೆಯಿಂದ ಅಥವಾ ತೋರ್ಪಡಿಕೆಯಿಂದ ವಾಸ್ತವಿಕವಾಗಿ ವಂಚಿಸಿರಲಿ ಅಥವಾ ಇಲ್ಲದಿರಲಿ, ಆತನು ಮೊದಲನೆ

ಅಪರಾಧ ನಿರ್ಣೀತನಾದ ಸಂದರ್ಭದಲ್ಲಿ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ತರುವಾಯದ ಅಪರಾಧ ನಿರ್ಣೀತನಾದ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**XXX XXX XXX**

**ಭಾಗ-2**

**ಕರ್ನಾಟಕ ಆಯುರ್ವೇದ, ಪ್ರಕೃತಿ ಚಿಕಿತ್ಸೆ, ಸಿದ್ಧ, ಯುನಾನಿ ಮತ್ತು ಯೋಗ ವೈದ್ಯ ವೃತ್ತಿ ನಿರತರ ನೋಂದಣಿ ಮತ್ತು ವೈದ್ಯಕೀಯ ವೃತ್ತಿ ನಿರತರ ಸಂಕೀರ್ಣ ಉಪಬಂಧಗಳ ಅಧಿನಿಯಮ,1961ರ (1962ರ ಕರ್ನಾಟಕ ಅಧಿನಿಯಮ 9) ಉದ್ಧೃತ ಭಾಗ**

**XXX XXX XXX**

**36. ದಂಡ.-** ಈ ಅಧಿನಿಯಮದ 34 ಮತ್ತು 35ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣೀತನಾದ ಬಳಿಕ, ಮೊದಲ ಅಪರಾಧಕ್ಕಾಗಿ ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ, ಎರಡನೇ ಅಪರಾಧಕ್ಕಾಗಿ ಎರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಮತ್ತು ಒಂದು ವರ್ಷ ಕಾರಾವಾಸದಿಂದ ಹಾಗೂ ತದನಂತರದ ಅಪರಾಧಕ್ಕಾಗಿ ಅವನು ಅಪರಾಧ ನಿರ್ಣೀತನಾದ ತರುವಾಯದ ಅಂಥ ಪ್ರತಿಯೊಂದು ಅಪರಾಧಕ್ಕಾಗಿ ಐದು ಲಕ್ಷ ರೂಪಾಯಿಗಳ ಜುಲ್ಮಾನೆಯಿಂದ ಮತ್ತು ಮೂರು ವರ್ಷಗಳ ಅವಧಿಯನ್ನು ಮೀರದ ಕಾರಾವಾಸದಿಂದ ದಂಡಿತನಾಗತಕ್ಕದ್ದು.

**XXX XXX XXX**

**KARNATAKA LEGISLATIVE ASSEMBLY**

**SIXTEENTH LEGISLATIVE ASSEMBLY**

**SEVENTH SESSION**

# THE KARNATAKA MEDICAL REGISTRATION (AMENDMENT) BILL, 2025

**(LA Bill No. 32 of 2025)**

A Bill further to amend the Karnataka Medical Registration Act, 1961.

Whereas, it is expedient further to amend the Karnataka Medical Registration Act, 1961 (Karnataka Act 34 of 1961), for the purposes hereinafter appearing;

Be it enacted by the Karnataka State Legislature in the seventy sixth year of the Republic of India as follows:-

**1. Short title and commencement.-** (1) This Act may be called the Karnataka Medical Registration (Amendment) Act, 2025.

(2) It shall come into force at once.

**2. Amendment of section 28.-** In the Karnataka Medical Registration Act, 1961 (Karnataka Act 34 of 1961), in section 28, for the words "in the case of a first conviction with fine which extend ten thousand rupees and in the case of subsequent conviction with fine which may extend to one lakh rupees", the words, figures and brackets "under the provisions of section 36 of the Karnataka Ayurvedic, Naturopathy, Siddha, Unani and Yoga Practitioners' Registration and Medical Practitioners' Miscellaneous Provisions Act, 1961 (Karnataka Act 9 of 1962)" shall be substituted.

**STATEMENT OF OBJECTS AND REASONS**

It is considered necessary to amend the Karnataka Medical Registration Act, 1961 (Karnataka Act 34 of 1961) to prescribe the penalty provisions for quackery as per the provision of section 36 of the Karnataka Ayurvedic, Naturopathy, Siddha, Unani and Yoga Practitioners' Registration and Medical Practitioners' Miscellaneous Provisions Act, 1961 (Karnataka Act 9 of 1962).

Hence, the Bill.

**FINANCIAL MEMORANDUM**

There is no financial implication involved in the proposed Legislative measure

**Dinesh Gundu Rao**
Minister of Health and
Family Welfare Department

**M.K. VISHALAKSHI**
Secretary
Karnataka Legislative Assembly

**ANNEXURE**

**Part-1**

**THE EXTRACT OF THE KARNATAKA MEDICAL REGISTRATION ACT, 1961 (KARNATAKA ACT 34 OF 1961)**

**XXX XXX XXX**

**28. Penalties for quackery.-** Whoever falsely pretends to be registered under this Act or not being registered under this Act uses in connection with his name or title any words or letters representing that he is so registered shall, whether any person is actually deceived by such pretence or representation or not, be punished in the case of a first conviction with fine which extend ten thousand rupees and in the case of subsequent conviction with fine which may extend to one lakh rupees.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**XXX XXX XXX**

## Part-2

**THE EXTRACT OF THE KARNATAKA AYURVEDIC, NATUROPATHY, SIDDHA, UNANI AND YOGA PRACTITIONERS' REGISTRATION AND MEDICAL PRACTITIONERS' MISCELLANEOUS PROVISIONS ACT, 1961 (KARNATAKA ACT 9 OF 1962).**

**XXX XXX XXX**

**36. Penalty**.- Any person who act in contravention of the provisions of section 34 and 35 of this Act, shall on conviction, be punished with fine which may extend to rupees twenty five thousand for the first offence, to a fine of rupees two lakhs fifty thousand and imprisonment of one year for the second offence and a fine of rupees five lakhs and imprisonment for a term not exceeding three years for every subsequent offence after the conviction of such person for such subsequent offence.

**XXX XXX XXX**

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH